**C**

**CCE PR**
**NSR & NSPR**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESHWARAM, BENGALURU – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್ / ಜುಲೈ, 2022**

**S.S.L.C. EXAMINATION, JUNE / JULY, 2022**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 28. 06. 2022 ] **ಸಂಕೇತ ಸಂಖ್ಯೆ : 01-K**

Date : 28. 06. 2022 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

**[ ಗರಿಷ್ಠ ಅಂಕಗಳು : 125**

**[ Max. Marks : 125**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 1. | ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ<br>(ಎ) ಆವರಣ (ಬಿ) ವಿವರಣ<br>(ಸಿ) ಉದ್ಧರಣ (ಡಿ) ವಾಕ್ಯವೇಷ್ಟನ<br>***ಉತ್ತರ :*** (ಬಿ) ವಿವರಣ | |

**ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು**

2. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಕರ್ಮಧಾರಯ (ಬಿ) ದ್ವಿಗು

(ಸಿ) ತತ್ಪುರುಷ (ಡಿ) ಗಮಕ

***ಉತ್ತರ :*** (ಸಿ) ತತ್ಪುರುಷ

3. ತೃತೀಯಾ ವಿಭಕ್ತಿಯ ಕಾರಕಾರ್ಥ

(ಎ) ಸಂಪ್ರದಾನ (ಬಿ) ಅಪಾದಾನ

(ಸಿ) ಕರ್ಮಾರ್ಥ (ಡಿ) ಕರಣಾರ್ಥ

***ಉತ್ತರ :*** (ಡಿ) ಕರಣಾರ್ಥ

4. 'ಬೇಗನೆ' ಪದವು ಈ ಅವ್ಯಯಕ್ಕೆ ಸೇರಿದೆ

(ಎ) ಸಾಮಾನ್ಯಾರ್ಥಕ (ಬಿ) ಅನುಕರಣ

(ಸಿ) ಭಾವಸೂಚಕ (ಡಿ) ಕ್ರಿಯಾರ್ಥಕ

***ಉತ್ತರ :*** (ಎ) ಸಾಮಾನ್ಯಾರ್ಥಕ

5. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ

(ಎ) ೦೬ (ಬಿ) ೦೯

(ಸಿ) ೧೩ (ಡಿ) ೨೫

***ಉತ್ತರ :*** (ಬಿ) ೦೯

6. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿರುವ ವಾಕ್ಯ

(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ

(ಸಿ) ಪ್ರಶ್ನಾರ್ಥಕ ವಾಕ್ಯ (ಡಿ) ಮಿಶ್ರವಾಕ್ಯ

***ಉತ್ತರ :*** (ಡಿ) ಮಿಶ್ರವಾಕ್ಯ

7. 'ಮಾಡು' ಪದದ ನಿಷೇಧಾರ್ಥಕ ರೂಪ

(ಎ) ಮಾಡಲಿ (ಬಿ) ಮಾಡರು

(ಸಿ) ಮಾಡುವನು (ಡಿ) ಮಾಡಿಯಾರು

***ಉತ್ತರ :*** (ಬಿ) ಮಾಡರು

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | 'ಸಕ್ಕಾರಿ' ಪದದ ಗ್ರಾಂಥಿಕ ರೂಪ | |
| | (ಎ) ಸಕ್ಕರೆ (ಬಿ) ಶರ್ಕರ | |
| | (ಸಿ) ಸರ್ಕಾರಿ (ಡಿ) ಅಕ್ಕರೆ | |
| | ***ಉತ್ತರ :*** (ಎ) ಸಕ್ಕರೆ | |
| 9. | ಆರು ಸಾಲಿನ ಪದ್ಯವನ್ನು ಹೀಗೆನ್ನುವರು | |
| | (ಎ) ತ್ರಿಪದಿ (ಬಿ) ಚೌಪದಿ | |
| | (ಸಿ) ಷಟ್ಪದಿ (ಡಿ) ಅಷ್ಟಪದಿ | |
| | ***ಉತ್ತರ :*** (ಸಿ) ಷಟ್ಪದಿ | |
| 10. | 'ಮಳೆಯಿಂದ' ಪದವು ಈ ಸಂಧಿಗೆ ಉದಾಹರಣೆಯಾಗಿದೆ | |
| | (ಎ) ಲೋಪ (ಬಿ) ಗುಣ | |
| | (ಸಿ) ಆದೇಶ (ಡಿ) ಆಗಮ | |
| | ***ಉತ್ತರ :*** (ಡಿ) ಆಗಮ | |
| II. | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 5 × 1 = 5 |
| 11. | ಬಟ್ಟಬಯಲು : ದ್ವಿರುಕ್ತಿ :: ಹುಳಹುಪ್ಪಡಿ : ......................... . | |
| | ***ಉತ್ತರ :*** ಜೋಡುನುಡಿ | |
| 12. | ಶರಚ್ಚಂದ್ರ : ಶ್ಚುತ್ವಸಂಧಿ :: ದಿಗಂತ : ......................... . | |
| | ***ಉತ್ತರ :*** ಜಶ್ತ್ವಸಂಧಿ | |
| 13. | ಮಲಗು : ಅಕರ್ಮಕ ಧಾತು :: ಕೊಡು : ......................... . | |
| | ***ಉತ್ತರ :*** ಸಕರ್ಮಕ ಧಾತು | |
| 14. | ವಂಧ್ಯಾ : ಬಂಜೆ :: ಕುಠಾರ : ......................... . | |
| | ***ಉತ್ತರ :*** ಕೊಡಲಿ | |
| 15. | ರಾಜೀವ ಸಖ : ಸೂರ್ಯ :: ರವಿಸುತ : ......................... . | |
| | ***ಉತ್ತರ :*** ಕರ್ಣ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.** **(ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | $8 \times 1 = 8$ |
| 16. | ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ? | |
| | ***ಉತ್ತರ :*** | |
| | ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ. | |
| 17. | ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು ? | |
| | ***ಉತ್ತರ :*** | |
| | ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಚೇರಿಂಗ್ ಕ್ರಾಸ್. | |
| 18. | ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು ? | |
| | ***ಉತ್ತರ :*** | |
| | ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುತ್ತವೆ. | |
| 19. | ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ? | |
| | ***ಉತ್ತರ :*** | |
| | ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ದೇವಗುರು, ದ್ವಿಜ ಪೂಜೆಯನ್ನು ಮಾಡುತ್ತಾ ಕಳೆದನು. | |
| 20. | ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ? | |
| | ***ಉತ್ತರ :*** | |
| | ಆಶ್ವಯುಜದ ಬತ್ತದ ಗದ್ದೆ ಗಿಳಿಯೆದೆ ಬಣ್ಣದ ಹಸುರಿನಂತಿದೆ. | |
| 21. | ಲವನು ಕುದುರೆಯನ್ನು ಯಾವುದರಿಂದ ಕಟ್ಟಿದನು ? | |
| | ***ಉತ್ತರ :*** | |
| | ಲವನು ಕುದುರೆಯನ್ನು ತನ್ನ ಉತ್ತರೀಯದಿಂದ ಕಟ್ಟಿದನು. | |
| 22. | ವಿವೇಕಾನಂದರನ್ನು 'ಮಾನವತಾಮಿತ್ರ'ರೆಂದು ಕರೆದವರು ಯಾರು ? | |
| | ***ಉತ್ತರ :*** | |
| | ವಿವೇಕಾನಂದರನ್ನು 'ಮಾನವತಾಮಿತ್ರ'ರೆಂದು ಕರೆದವರು ಕುವೆಂಪು. | |
| 23. | ಭಗತ್‌ಸಿಂಗ್ ಡಬ್ಬಿಯಲ್ಲಿದ್ದ ಮಣ್ಣನ್ನು ತೋರಿಸಿ ತನ್ನ ಸಹೋದರಿಗೆ ಏನೆಂದು ಹೇಳಿದನು ? | |
| | ***ಉತ್ತರ :*** | |
| | ಭಗತ್‌ಸಿಂಗ್ ಡಬ್ಬಿಯಲ್ಲಿದ್ದ ಮಣ್ಣನ್ನು ತೋರಿಸಿ 'ತ್ಯಾಗದ ಪ್ರತೀಕ ಆ ಮಣ್ಣು' ಎಂದು ತನ್ನ ಸಹೋದರಿಗೆ ಹೇಳಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | **ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | 15 × 2 = 30 |
| 24. | ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು? | |
| | ***ಉತ್ತರ :*** | |
| | ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಒಂದು ಕಲ್ಲುಪಾಟಿಯನ್ನು ಹಾಕುತ್ತಾರೆ. ಇದನ್ನು 'ಸ್ಟೋನ್ ಆಫ್ ಸ್ಕೋನ್' ಎನ್ನುವರು. ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು. ಇದನ್ನು ೧ನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಕಿತ್ತುಕೊಂಡು ಬಂದಂತಿದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕ ಇದರ ಮೇಲೆಯೇ ಆಗಿದೆ. ಇಂಗ್ಲೆಂಡಿನ ಅತುಲ ವೈಭವವನ್ನು ನೋಡಿದರೆ ಇದರಲ್ಲೇನೋ ವಿಶೇಷತೆ ಇರಬಹುದು ಎನಿಸುತ್ತದೆ. | |
| 25. | ಟೊಪ್ಪಿಗೆಯ ವಿಶೇಷತೆಯನ್ನು ಗೋಕಾಕರು ಹೇಗೆ ದಾಖಲಿಸಿದ್ದಾರೆ ? | |
| | ***ಉತ್ತರ :*** | |
| | ಗೋಕಾಕರು ಲಂಡನ್ ನಗರದಲ್ಲಿ ಹೆಣ್ಣುಮಕ್ಕಳು ಧರಿಸಿರುವ ಟೊಪ್ಪಿಗೆಗಳನ್ನು ಕುತೂಹಲದಿಂದ ಗಮನಿಸುತ್ತಾರೆ. ಒಂದು ಟೊಪ್ಪಿಗೆಯಂತೆ ಇನ್ನೊಂದು ಇರಲಿಲ್ಲ. ಕನಿಷ್ಠಪಕ್ಷ ಟೊಪ್ಪಿಗೆಗೆ ಸಿಕ್ಕಿಸಿರುವ ಪುಚ್ಛವಾದರೂ ಬೇರೆಯಾಗಿರುತ್ತದೆ. ಕೋಟ್ಯವಧಿ ಟೊಪ್ಪಿಗೆಗಳನ್ನು ಪರೀಕ್ಷಿಸಿ ಇದನ್ನು ಮನಗಾಣಬಹುದು. ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿರುವುದಿಲ್ಲ ಹಾಗೆಯೇ ಒಂದು ಟೊಪ್ಪಿಗೆಯಂತೆ ಇನ್ನೊಂದು ಇರಲಿಲ್ಲ ಎಂದು ಟೊಪ್ಪಿಗೆಯ ವಿಶೇಷತೆಯನ್ನು ದಾಖಲಿಸಿದ್ದಾರೆ. | |
| 26. | ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು ? | |
| | ***ಉತ್ತರ :*** | |
| | ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು. ೧೯೧೩ ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಅನಂತರ ಉಳಿತಾಯ ಬ್ಯಾಂಕುಗಳು, ಕೈಗಾರಿಕಾ ಅಭಿವೃದ್ಧಿಗೆ ಫೀಡರ್ ಬ್ಯಾಂಕ್, ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಸಾರ್ವಜನಿಕ ಜೀವ ವಿಮಾ ಯೋಜನೆ ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಸಹಕಾರಿ ಕ್ಷೇತ್ರ ಬಲವರ್ಧನೆಗೊಳಿಸಿದರು, ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿ ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆಯವ್ಯಯದಲ್ಲಿ ಹೊಸ ದೃಷ್ಟಿಕೋನ ಕಂಡುಕೊಂಡರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 27. | ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ವಿವರಿಸಿ.<br>***ಉತ್ತರ :***<br>ಚಿಕ್ಕನಾಯಕನ ಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರು ಎತ್ತಿನಗಾಡಿಯಲ್ಲಿ ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರಿದಾರಿಯಿದೆ ಎನ್ನುವಾಗ ಎತ್ತುಗಳು ಮುಂದೆ ಹೋಗದೆ ಕಣಿ ಹಾಕಿದವು. ಅದೇ ವೇಳೆಗೆ ಹುಲಿಯ ಗರ್ಜನೆ ಕೇಳಿಸಿತು. ಎತ್ತಿನ ಘಂಟೆಯ ಶಬ್ದ, ರೈತರ ಮಾತನ್ನು ಕೇಳಿದ ಹುಲಿ ಘರ್ಜಿಸಿ ಪಲಾಯನ ಮಾಡಿತು. ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ಗುಂಡು ಹಾರಿಸಿ, ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜನ್ನು ಹೊತ್ತಿಸಿಕೊಂಡು ಬರುತ್ತಿದ್ದಾಗ ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸುತ್ತಾರೆ. | |
| 28. | ದುಷ್ಟಬುದ್ಧಿ ತನ್ನ ತಂದೆಗೆ ಏಕಾಂತದಲ್ಲಿ ಹೇಳಿದ ಮಾತುಗಳಾವುವು ?<br>***ಉತ್ತರ :***<br>ಮರದ ಬಳಿ ನಾಳೆ ಸಾಕ್ಷಿಯನ್ನು ಕೇಳುವುದಾಗಿ ಧರ್ಮಾಧಿಕರಣರು ತಿಳಿಸಿದಾಗ ಎಲ್ಲರೂ ತಮ್ಮ ತಮ್ಮ ಮನೆಗೆ ಹೋದರು. ಆದರೆ ದುಷ್ಟಬುದ್ಧಿ ಮನೆಗೆ ಬಂದವನೆ ತನ್ನ ತಂದೆಯ ಕೈ ಹಿಡಿದು ಏಕಾಂತಕ್ಕೆ ಕರೆದೊಯ್ದು ನಡೆದ ಘಟನೆಯನ್ನೆಲ್ಲ ತಿಳಿಸಿ, ನಿಮ್ಮದೊಂದು ವಚನದಿಂದ ಮಾತ್ರ ನಮ್ಮ ಪರಿವಾರವೆಲ್ಲ ಹಲವು ಕಾಲದವರೆಗೆ ಹಸಿಯದೆ ಉಂಡು ಸುಖವಾಗಿರಬಹುದು. ನೀವು ಆ ಪೊಟರೆಯಲ್ಲಿ ಅಡಗಿ ಕುಳಿತು ಧರ್ಮಬುದ್ಧಿಯೇ ಹೊನ್ನನ್ನೆಲ್ಲ ಕೊಂಡೊಯ್ದಿರುವನೆಂದು ನುಡಿಯಲು ಹೇಳಿದನು. | |
| 29. | ಧರ್ಮಬುದ್ಧಿಗೆ ದುಷ್ಟಬುದ್ಧಿ ನೀಡಿದ ಸಲಹೆಗಳಾವುವು ?<br>***ಉತ್ತರ :***<br>ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿ ಇಬ್ಬರೂ ವ್ಯಾಪಾರವನ್ನು ಮುಗಿಸಿ ತಮ್ಮ ಊರಿಗೆ ಹಿಂದಿರುಗುವ ಮುನ್ನ ಮಧುರಾಪುರದ ಹೊರವಲಯದ ಉದ್ಯಾನವನದಲ್ಲಿ ಉಳಿದುಕೊಂಡರು. ಮಧ್ಯರಾತ್ರಿಯಲ್ಲಿ ಧರ್ಮಬುದ್ಧಿ ದುಷ್ಟಬುದ್ಧಿಯನ್ನು ಕರೆದು ಹೊನ್ನನ್ನೆಲ್ಲ ಹಂಚಿಕೊಳ್ಳೋಣ ಎಂದಾಗ, 'ನಾವಿಬ್ಬರು ಈ ಹೊನ್ನನ್ನೆಲ್ಲ ಹಂಚಿಕೊಂಡು ಸ್ವತಂತ್ರರಾಗಿ ಇರುವವರಲ್ಲ ಪುನಃ ವ್ಯಾಪಾರಕ್ಕೆ ಹೋಗಲೇಬೇಕು. ಆದ್ದರಿಂದ ನಮ್ಮಿಬ್ಬರಿಗೆ ಖರ್ಚಿಗೆ ಬೇಕಾಗುವಷ್ಟು ಹೊನ್ನನ್ನು ಹಂಚಿಕೊಂಡು ಮಿಕ್ಕ ಹೊನ್ನನ್ನು ವಟವೃಕ್ಷದ ಬುಡದಲ್ಲಿ ಹೂತಿಡೋಣ' ಎಂದು ದುಷ್ಟಬುದ್ಧಿ ಸಲಹೆ ನೀಡಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 30. | ಕವಿ ಜಿ.ಎಸ್. ಶಿವರುದ್ರಪ್ಪನವರು ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕು ಎಂದಿದ್ದಾರೆ ?<br>**ಉತ್ತರ :**<br>ಮನುಷ್ಯ ಶ್ರೀಮಂತಿಕೆ, ಜಾತಿ, ಭಾಷೆ, ಮತ, ಧರ್ಮ, ಅಜ್ಞಾನಗಳಲ್ಲಿ ಮುಳುಗಿ ಹೋಗಿದ್ದಾನೆ. ಇಂತವರಲ್ಲಿ ಬದುಕಿನ ಬಗೆಗೆ ಹೊಸ ಭರವಸೆಯನ್ನು ಮೂಡಿಸಬೇಕು. ಜಾತಿ, ಮತ, ಧರ್ಮ, ಭಾಷೆಗಳ ಗೋಡೆಯನ್ನು ಕೆಡವಿ ಪ್ರೀತಿ, ವಿಶ್ವಾಸ, ನಂಬಿಕೆ, ಸಹಬಾಳ್ವೆ, ಸಹೋದರತೆ ಭಾವನೆಯ ಸೇತುವೆ ನಿರ್ಮಿಸಿ ಭೇದಭಾವವನ್ನು ತೊಡೆದುಹಾಕಬೇಕು. 'ವಸುಧೈವ ಕುಟುಂಬಕಂ' ಎಂಬಂತೆ ಇಡೀ ಜೀವಸಂಕುಲ, ಮಾನವ ಕುಲ ಒಂದೇ ಎಂದು ಬದುಕಬೇಕು ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ. | |
| 31. | ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?<br>**ಉತ್ತರ :**<br>೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಬ್ರಿಟಿಷರು ಭಾರತೀಯರ ಮೇಲೆ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಹೇರಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರ ಹೊಂದುವಂತಿಲ್ಲ. ಅಲ್ಲದೆ ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗಿತ್ತು. ಹಲಗಲಿಯ ಬೇಡರು ಬೇಟೆಯಾಡಿ ಬದುಕುತ್ತಿದ್ದರು. ಆಯುಧಗಳ ಹೊರತಾಗಿ ಬದುಕು ಅಸಾಧ್ಯ. ಆಯುಧಗಳನ್ನು ಒಪ್ಪಿಸಿದರೆ ಗುಲಾಮಗಿರಿಯನ್ನು ಒಪ್ಪಿಕೊಂಡಂತೆ ಆಗುತ್ತದೆ ಎಂದು ನಿರ್ಧರಿಸಿ ಹಲಗಲಿ ಬೇಡರು ಬ್ರಿಟಿಷರ ವಿರುದ್ಧ ದಂಗೆ ಎದ್ದರು. | |
| 32. | ಕುವೆಂಪು ಅವರಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿತ್ತು ?<br>**ಉತ್ತರ :**<br>ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿ ಸೌಂದರ್ಯ ಹಚ್ಚ ಹಸುರಿನಿಂದ ಕಂಗೊಳಿಸುತ್ತಿರುತ್ತದೆ. ಕವಿಗೆ ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ ಹಾಗೂ ಸಂಜೆಯ ಬಿಸಿಲೂ ಕೂಡ ಹಸುರಾಗಿಯೇ ತೋರುತ್ತದೆ. ಇದು ಪ್ರಕೃತಿ, ಅಲ್ಲಿಯ ಹಸುರಿನೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ತಿಳಿಸುತ್ತದೆ. | |
| 33. | ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು ?<br>**ಉತ್ತರ :**<br>ನನ್ನ ಪ್ರಿಯ ಗೆಳೆಯ ಕರ್ಣನನ್ನು ಪಾರ್ಥ ಹಾಗೂ ನನ್ನ ಪ್ರಿಯ ತಮ್ಮ ದುಶ್ಶಾಸನನ್ನು ಭೀಮ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕೊಂದಿದ್ದಾರೆ. ಪಾರ್ಥ-ಭೀಮರು ಬದುಕಿರುವವರೆಗೆ ಸಂಧಿಗೆ ಒಪ್ಪಲಾರೆ. ಇವರಿಬ್ಬರನ್ನು ಕೊಂದು, ನನ್ನ ದುಃಖ ಕಡಿಮೆಯಾದ ಬಳಿಕ ಧರ್ಮರಾಯನೊಂದಿಗೆ ಸಂಧಿ ಮಾಡಿಕೊಳ್ಳಲು ಬಯಸುತ್ತೇನೆ ಎಂದು ದುರ್ಯೋಧನ ತನ್ನ ಅಭಿಪ್ರಾಯವನ್ನು ಭೀಷ್ಮರಿಗೆ ತಿಳಿಸುತ್ತಾನೆ. | |
| 34. | ವಾಲ್ಮೀಕಿ ಋಷಿಗಳ ಆಶ್ರಮಕ್ಕೆ ಯಜ್ಞಾಶ್ವ ಬಂದ ಬಗೆಯನ್ನು ವಿವರಿಸಿ.<br>***ಉತ್ತರ :***<br>ಶ್ರೀರಾಮನ ಅಶ್ವಮೇಧಯಾಗದ ಕುದುರೆ ಎಂದು ತಿಳಿದು ಪರಾಕ್ರಮಿಗಳಾದ ರಾಜರುಗಳೇ ಕುದುರೆಯನ್ನು ತಡೆಯದೆ ನಮಸ್ಕರಿಸಿ ಕಳಿಸುತ್ತಿದ್ದರು. ಹೀಗೆ ಇಡೀ ಭೂಮಂಡಲವನ್ನೆಲ್ಲಾ ಸಂಚರಿಸುತ್ತ ವಾಲ್ಮೀಕಿ ಮುನಿಯ ಆಶ್ರಮದ ಕಡೆಗೆ ಬರುತ್ತದೆ. ಆಶ್ರಮದ ಉದ್ಯಾನವನದಲ್ಲಿ ಬೆಳೆದಿದ್ದ ಹಸಿರು ಹುಲ್ಲನ್ನು ನೋಡಿ ತಿನ್ನಲು ಬಯಸಿದ ಯಜ್ಞಾಶ್ವ ವಾಲ್ಮೀಕಿ ಋಷಿಯ ಆಶ್ರಮವನ್ನು ಪ್ರವೇಶಿಸಿತು. | |
| 35. | ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು. ಏಕೆ ?<br>***ಉತ್ತರ :***<br>ವಿವೇಕಾನಂದರು ಏಕಸಂಸ್ಕೃತಿ ಮತ್ತು ಏಕಧರ್ಮ ವಿಸ್ತರಣೆಯ ಪರವಾಗಿರಲಿಲ್ಲ. ಏಕಧರ್ಮ ಶ್ರೇಷ್ಠತೆ ಮತ್ತು ವಿಸ್ತರಣೆ ಜೀವ ವಿರೋಧ ಎಂದು ಭಾವಿಸಿದ್ದರು. ಕೋಮುವಾದವು ಏಕಧರ್ಮ ಮತ್ತು ಏಕಸಂಸ್ಕೃತಿಯೇ ಶ್ರೇಷ್ಠವೆಂದೂ, ಅದೇ ಅಂತಿಮ ಎಂದು ನಂಬುತ್ತ, ನಂಬಿಸುತ್ತ ಪರಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ. ಈ ಕಾರಣದಿಂದಾಗಿ ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು. | |
| 36. | ‘ವಸಂತ ಮುಖ ತೋರಲಿಲ್ಲ’ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?<br>***ಉತ್ತರ :***<br>ಒಡೆಯನ ಅಂಗಳದಲ್ಲಿ ಮೈತುಂಬಿ ನಿಂತ ಮಾವಿನ ಮರಗಳು, ಸ್ವತಂತ್ರವಾಗಿ ರೆಕ್ಕೆ ಬಿಚ್ಚಿ ಹಾರಾಡುತ್ತಿರುವ ಹಕ್ಕಿಗಳು, ಮಾವಿನೆಲೆ ಚಿಗುರನ್ನು ತಿಂದು ಮನದುಂಬಿ ಇಂಪಾಗಿ ಹಾಡುತ್ತಿರುವ ಕೋಗಿಲೆಗಳು, ಉಕ್ಕಿ ಹರಿಯುತ್ತಿರುವ ಕಡಲು. ಹೀಗೆ ‘ವಸಂತ ಮುಖ ತೋರಲಿಲ್ಲ’ ಕವನದಲ್ಲಿ ಪ್ರಕೃತಿ ಸಂಭ್ರಮ ವ್ಯಕ್ತವಾಗಿದೆ. | |
| 37. | ಭಗತ್‌ಸಿಂಗ್ ಹಾಗೂ ಆತನ ಸಹಚರರು ಹುತಾತ್ಮರಾಗಲು ಕಾರಣವೇನು ?<br>***ಉತ್ತರ :***<br>ತನ್ನ ೧೨ನೇ ವಯಸ್ಸಿನಲ್ಲಿ ಜಲಿಯನ್ ವಾಲಾಬಾಗ್‌ನಿಂದ ತಂದಿದ್ದ ರಕ್ತಸಿಕ್ತವಾದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್ ಬ್ರಿಟಿಷರ ವಿರುದ್ಧ ಸೇಡು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ತೀರಿಸಿಕೊಳ್ಳಲು ನಿರ್ಧರಿಸಿದ್ದನು. ಅದರಂತೆ ಮುಂದೆ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷರ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರದತ್ತರೊಂದಿಗೆ ಭಗತ್‌ಸಿಂಗ್ ಮರಣದಂಡನೆಗೆ ಗುರಿಯಾಗಿ ಹುತಾತ್ಮನಾದರು. | |
| 38. | ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ ? | |
| | ***ಉತ್ತರ :*** | |
| | ನೀರಿನಲ್ಲಿಯೇ ಜನಿಸಿ, ನೀರಿನಲ್ಲಿಯೇ ಬೆಳೆಯುತ್ತದೆ. ಆದರೆ ನೀರು ತಾಗಿದರೆ ಮಟಮಾಯವಾಗುವ ವಸ್ತು ಎಂದರೆ ಉಪ್ಪು ಎಂದು ಜನಪದರು ಉಪ್ಪಿನ ವೈಶಿಷ್ಟ್ಯತೆಯನ್ನು ಒಗಟಿನಲ್ಲಿ ವಿವರಿಸಿದ್ದಾರೆ. | |
| V. | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 4 × 3 = 12 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಬಿರುದು/ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ಸಾರಾ ಅಬೂಬಕ್ಕರ್. | |
| | ***ಉತ್ತರ :*** | |
| | ಕರ್ನಾಟಕದ ಸಂಸ್ಕೃತಿ ಚಿಂತಕರಲ್ಲಿ ಒಬ್ಬರಾದ ಸಾರಾ ಅಬೂಬಕ್ಕರ್ ಅವರು ನಾಡಿನ ಖ್ಯಾತ ಕತೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯರಾಗಿದ್ದಾರೆ. ಇವರು ೩೦ ಜೂನ್ ೧೯೩೬ ರಂದು ಕಾಸರಗೋಡಿನಲ್ಲಿ ಜನಿಸಿದರು. ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವುದು ಅಪರೂಪ ಎಂಬ ಸಂದರ್ಭದಲ್ಲಿ ಜನಪ್ರಿಯರಾದ ಇವರು 'ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ' ಎಂಬ ಕಾದಂಬರಿಗಳನ್ನು ಹಾಗೂ 'ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ' ಎಂಬ ಕಥಾಸಂಕಲನಗಳನ್ನು. ರಚಿಸಿದ್ದಾರೆ. ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪ್ರಶಸ್ತಿಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ 'ನೃಪತುಂಗ' ಪ್ರಶಸ್ತಿ ಲಭಿಸಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 40. | ಎ.ಎನ್. ಮೂರ್ತಿರಾವ್.<br>*ಉತ್ತರ :*<br>ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಗದ್ಯ ಬರೆಹಗಾರರಾದ ಎ.ಎನ್. ಮೂರ್ತಿರಾವ್‌ರವರು ಪ್ರಬಂಧಕಾರರಾಗಿಯೇ ಮಾನ್ಯರಾಗಿದ್ದಾರೆ. ಇವರು ೧೯೦೦ ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಆಕಾಶವಾಣಿಯ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರು 'ಹಗಲುಗನಸುಗಳು, ಅಲೆಯುವಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಮಿನುಗು–ಮಿಂಚು, ಪೂರ್ವಸೂರಿಗಳೊಡನೆ, ಚಂಡಮಾರುತ, ಚಿತ್ರಗಳು – ಪತ್ರಗಳು, ದೇವರು' ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಲಾಗಿದೆ. | |
| 41. | ದ.ರಾ. ಬೇಂದ್ರೆ.<br>*ಉತ್ತರ :*<br>ನವೋದಯ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಕ್ರಿ.ಶ. ೧೮೯೬ ರಲ್ಲಿ ಧಾರವಾಡದಲ್ಲಿ ಜನಿಸಿದರು. ಇವರು 'ಗರಿ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ನಾದಲೀಲೆ, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ ಹೊಗೆ, ಸಾಹಿತ್ಯದ ವಿರಾಟ್ ಸ್ವರೂಪ, ಅರಳು–ಮರಳು, ನಾಕುತಂತಿ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರು 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ' ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.<br>ಪ್ರೌಢಶಾಲಾ ಅಧ್ಯಾಪಕರಾಗಿ, ಕನ್ನಡ ಪ್ರಾಧ್ಯಾಪಕರಾಗಿ. ಧಾರವಾಡದ ಬಾನುಲಿ ಕೇಂದ್ರದ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಶಿವಮೊಗ್ಗದಲ್ಲಿ ೧೯೪೩ ರಲ್ಲಿ ನಡೆದ ೨೭ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

42. ರನ್ನ.

***ಉತ್ತರ :***

ಕನ್ನಡದ ಕವಿ ರತ್ನತ್ರಯರಲ್ಲಿ ಒಬ್ಬನಾದ ಕವಿ ರನ್ನ ಕ್ರಿ.ಶ. ಸುಮಾರು ೯೪೯ ರಲ್ಲಿ ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಈತನ ತಂದೆ ಜಿನವಲ್ಲಭ ತಾಯಿ ಅಬ್ಬಲಬ್ಬೆ. ಇವನು ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು. ಇವನು 'ಸಾಹಸ ಭೀಮ ವಿಜಯಂ' (ಗದಾಯುದ್ಧ), 'ಅಜಿತ ತೀರ್ಥಂಕರ ಪುರಾಣ ತಿಲಕಂ', 'ಪರಶುರಾಮ ಚರಿತಂ', 'ಚಕ್ರೇಶ್ವರ ಚರಿತಂ' ಎಂಬ ಕಾವ್ಯಗಳನ್ನು ಬರೆದಿದ್ದಾರೆ. 'ರನ್ನಕಂದ' ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದು ಬರುತ್ತದೆ. ಈತನಿಗೆ ತೈಲಪನು 'ಕವಿ ಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾನೆ.

VI. **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** 1 × 3 = 3

| | |
|---|---|
| ಪ್ರಸ್ತಾರ ಹಾಕುವುದು | 1 ಅಂಕ |
| ಗಣ ವಿಭಾಗಿಸುವುದು | 1 ಅಂಕ |
| ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| ಒಟ್ಟು | 3 ಅಂಕಗಳು |

43. ಇನತನೂಜನ ಕೂಡೆ ಮೈದುನ

ತನದ ಸರಸವನೆಸಗಿ ರಥದೊಳು

ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ

| ೩ | ೪ | ೩ | ೪ |
|---|---|---|---|
| U U U | — U U | — U | — U U |
| ಇನ ತ | ನೂಜನ | ಕೂಡೆ | ಮೈದುನ |

| ೩ | ೪ | ೩ | ೪ |
|---|---|---|---|
| U U U | U U U U | U U U | U U U U |
| ತನದ | ಸರಸವ | ನೆಸಗಿ | ರಥದೊಳು |

| ೩ | ೪ | ೩ | ೪ | ೩ | ೪ | ೨(ಗು) |
|---|---|---|---|---|---|---|
| U U U | U U U U | U U U | — U U | U U U | — U U | — |
| ದನುಜ | ರಿಪು ಬರ | ಸೆಳೆದು | ಕುಳ್ಳಿರಿ | ಸಿದನು | ಪೀಠದ | ಲಿ |

ಇದು ಮಾತ್ರಾಗಣಾಧಾರಿತ ಭಾಮಿನಿ ಷಟ್ಪದಿಯ ಲಕ್ಷ್ಯವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| VII. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |
| 44. | ‘‘ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ’’<br>***ಉತ್ತರ :***<br>*ಅಲಂಕಾರದ ಹೆಸರು :* ಉಪಮಾಲಂಕಾರ<br>*ಲಕ್ಷಣ :* ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.<br>*ಸಮನ್ವಯ :* *ಉಪಮೇಯ :* ನೀಚರಿಗೆ ಮಾಡಿದ ಉಪಕಾರ<br>*ಉಪಮಾನ :* ಹಾವಿಗೆ ಹಾಲೆರೆಯುವುದು<br>*ಉಪಮಾವಾಚಕ :* ಅಂತೆ<br>*ಸಮಾನಧರ್ಮ :* ಲುಪ್ತವಾಗಿದೆ (ನಿಷ್ಪ್ರಯೋಜಕ)<br>ಇಲ್ಲಿ ಉಪಮೇಯವಾದ ‘ನೀಚರಿಗೆ ಮಾಡಿದ ಉಪಕಾರ’ವನ್ನು ಉಪಮಾನವಾದ ‘ಹಾವಿಗೆ ಹಾಲೆರೆಯುವುದಕ್ಕೆ’ ಹೋಲಿಸಲಾಗಿದೆ. ‘ಅಂತೆ’ ಎಂಬ ಉಪಮಾವಾಚಕ ಪದವಿದ್ದು, ಸಮಾನಧರ್ಮ ಲುಪ್ತವಾಗಿದೆ. ಆದ್ದರಿಂದ ಇದು ಧರ್ಮಲುಪ್ತೋಪಮಾಲಂಕಾರ (ಉಪಮಾಲಂಕಾರ)ದ ಲಕ್ಷ್ಯವಾಗಿದೆ. | |
| VIII. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | 2 × 3 = 6 |
| | ಗಾದೆಯ ಮಹತ್ತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 45. | ಕೈ ಕೆಸರಾದರೆ ಬಾಯಿ ಮೊಸರು.<br>***ಅಥವಾ***<br>ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ | |
| 46. | ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ.<br>***ಅಥವಾ***<br>ಹಣಕ್ಕಿಂತ ಗುಣ ಮೇಲು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| IX. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 47. | "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ."<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು' ಎಂಬ ಕಥಾಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br>***ಸಂದರ್ಭ :*** ಒಂಟಿ ಮನೆ ಪ್ರವೇಶಿಸಿದ ರಾಹಿಲ ಮುದುಕಿಯ ಸೊಸೆ ಹೆರಿಗೆಯ ನೋವಿನಿಂದ ಬಳಲುತ್ತಿರುವುದನ್ನು ತಿಳಿದು, ನಾನೋರ್ವ ಡಾಕ್ಟರ್ ಆಕೆಯನ್ನು ಪರೀಕ್ಷಿಸುವುದಾಗಿ ಹೇಳುತ್ತಾನೆ. ಮುದುಕಿ ತನ್ನ ಮಗನ ಬಟ್ಟೆ ತಂದು ಕೊಟ್ಟಳು. ಕುಳಿತಲ್ಲೇ ಬಟ್ಟೆ ಬದಲಿಸುವುದನ್ನು ಕಂಡು 'ಎದ್ದು ನಿಲ್ಲಲಾಗುತ್ತಿಲ್ಲವೇ ?' ಎಂದು ಮುದುಕಿ ಪ್ರಶ್ನಿಸಿದಾಗ, 'ಕಾಲಿಗೆ ಸ್ವಲ್ಪ ಪೆಟ್ಟಾಗಿದೆ. ಅದನ್ನು ಆಮೇಲೆ ನೋಡುವಾ' ಎಂದು ಮುದುಕಿಯ ಸೊಸೆಯ ಕೋಣೆ ಕಡೆಗೆ ತೆವಳುತ್ತಾ ಹೋಗುತ್ತಾನೆ. ಈ ಸಂದರ್ಭದಲ್ಲಿ ರಾಹಿಲ ಮೇಲಿನಂತೆ ಮುದುಕಿಗೆ ಹೇಳುತ್ತಾನೆ.<br>***ಸ್ವಾರಸ್ಯ :*** ತನ್ನ ಕಾಲಿಗೆ ಪೆಟ್ಟಾಗಿದ್ದರೂ ಮುದುಕಿಯ ಸೊಸೆಗೆ ಹೆರಿಗೆ ಮಾಡಿಸಲು ಮುಂದಾಗುವ ರಾಹಿಲನ ವೈದ್ಯ ವೃತ್ತಿಧರ್ಮ, ಮಾನವೀಯತೆ ಇತರರ ನೋವಿಗೆ ಸ್ಪಂದಿಸುವ ಗುಣ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 48. | "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br>***ಸಂದರ್ಭ :*** ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಪಂಡಿತ್ ಜವಾಹರಲಾಲ್ ನೆಹರು ಅವರು ವಿಶ್ವೇಶ್ವರಯ್ಯನವರನ್ನು ಕುರಿತು ಭಾಷಣ ಮಾಡುವಾಗ 'ಭಾರತೀಯರು ನುಡಿದಂತೆ ನಡೆಯಲಾರದವರು' | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಎಂಬ ದೂಷಣೆಯಿದೆ. ನೀವು ಇದಕ್ಕೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ ಎಂದು ಹೇಳುತ್ತಾ ಮೇಲಿನಂತೆ ಹೇಳಿದ್ದಾರೆ. | |
| | ***ಸ್ವಾರಸ್ಯ :*** 'ಮಾತು ಬೆಳ್ಳಿ ಮೌನ ಬಂಗಾರ', 'ಮಾತಿಗಿಂತ ಕೃತಿ ಲೇಸು' ಎಂಬಂತೆ ವಿಶ್ವೇಶ್ವರಯ್ಯನವರು ಕೆಲಸದ ಮೂಲಕ ಮಾತನಾಡುತ್ತಿದ್ದರು ಎಂಬುದು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 49. | "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ." | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಆವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಎಂಬ ವೈಚಾರಿಕ ಬಿಡಿಲೇಖನಗಳ ಸಂಕಲನದಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ. | |
| | ***ಸಂದರ್ಭ :*** ಒಮ್ಮೆ ಗ್ರಾಮದ ಜನರೆಲ್ಲ ಸೇರಿ ಮಂಚಮ್ಮ ದೇವಿಗೆ ಗುಡಿ ಕಟ್ಟಲು ಆರಂಭಿಸುತ್ತಾರೆ. ಗುಡಿ ಚಾವಣಿ ಮಟ್ಟಕ್ಕೆ ಬರುತ್ತಿದ್ದಂತೆ ಆ ದೇವತೆ ಒಬ್ಬನ ಮೈಮೇಲೆ ಆವಾಹಿಸಿಕೊಂಡು 'ನಿಲ್ಸಿ ನನ್ ಮಕ್ಕಳಾ, ಏನ್ ಮಾಡ್ತಾ ಇದ್ದೀರಿ ?' ಎಂದು ಪ್ರಶ್ನಿಸಿದಾಗ ನಿನಗೊಂದು ಗುಡಿಮನೆ ಕಟ್ಟುತ್ತಿದ್ದೇವೆ ಎಂದು ಒಬ್ಬರು ಹೇಳುತ್ತಾರೆ. 'ನಿಮಗೆಲ್ಲಾ ಮನೆಯಿದೆಯೇ ?' ಎಂದು ದೇವಿ ಕೇಳಿದಾಗ ಅಲ್ಲಿದ್ದ ಓರ್ವ 'ನನಗಿಲ್ಲ ತಾಯಿ' ಎನ್ನುತ್ತಾನೆ. ಆಗ ಮಂಚಮ್ಮದೇವಿ ಮೇಲಿನಂತೆ ಹೇಳುತ್ತಾಳೆ. | |
| | ***ಸ್ವಾರಸ್ಯ :*** ದೇವಿಯಲ್ಲಿದ್ದ ಕಾರುಣ್ಯ, ಸಮಾನತೆ, ಭಕ್ತವಾತ್ಸಲ್ಯ, ಮಾನವೀಯ ಮೌಲ್ಯ, ಭಕ್ತರಿಗೆ ಸಿಗದೇ ಇರುವುದು ತನಗೂ ಬೇಡ ಎಂದು ನಿರಾಕರಿಸುವ ಗುಣ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 50. | "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ." | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸುತ್ತ ವಾಕ್ಯವನ್ನು ಡಾ. ಬಿ.ಎಸ್. ಗದ್ದಗಿಮಠ ಅವರು ಸಂಪಾದಿಸಿದ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಪದ್ಯಪಾಠದಿಂದ ಆರಿಸಲಾಗಿದೆ. | |
| | ***ಸಂದರ್ಭ :*** ಬ್ರಿಟಿಷರು ಹೊರಡಿಸಿದ ನಿಶ್ಶಸ್ತ್ರೀಕರಣ ಕಾಯಿದೆಯನ್ನು ವಿರೋಧಿಸಿದ ಹಲಗಲಿ ಬೇಡರು ದಂಗೆಯೆದ್ದರು. ಕಾರಕೂನನ ಕಪಾಳಕ್ಕೆ ಹೊಡೆದರು. ಸಿಟ್ಟಿಗೆದ್ದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬ್ರಿಟಿಷರು ಮತ್ತಷ್ಟು ದಂಡನ್ನು ಹಲಗಲಿಗೆ ಕಳಿಸಿದರು. ಈ ದಂಡು ಮಹಿಳೆಯರು ಮಕ್ಕಳು, ವೃದ್ಧರು ಎನ್ನದೆ ಸಿಕ್ಕಸಿಕ್ಕವರನ್ನು ನಿರ್ದಯವಾಗಿ ಗುಂಡು ಹೊಡೆದು ಕೊಂದರು ಎಂಬುದನ್ನು ಲಾವಣಿಕಾರ ಮೇಲಿನಂತೆ ಹೇಳಿದ್ದಾನೆ. | |
| | ***ಸ್ವಾರಸ್ಯ :*** ಬ್ರಿಟಿಷರ ದೌರ್ಜನ್ಯ, ನಿಷ್ಕರುಣೆ, ಶೋಷಣೆ ಗುಂಡು ಹೊಡೆದು ಕೊಲ್ಲುವುದರ ಮೂಲಕ ಹೋರಾಟವನ್ನು ಹತ್ತಿಕ್ಕುವ ಕುತಂತ್ರ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 51. | "ಬೇರೆ ಬಣ್ಣವನೆ ಕಾಣೆ." | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಕುವೆಂಪು ಅವರು ರಚಿಸಿರುವ 'ಪಕ್ಷಿಕಾಶಿ' ಕವನ ಸಂಕಲನದಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಲಾಗಿದೆ. | |
| | ***ಸಂದರ್ಭ :*** ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಕವಿ ಮನ ಪ್ರಕೃತಿಯಲ್ಲಿ ತಲ್ಲೀನವಾಗಿದೆ. ಎಲ್ಲಿ ನೋಡಿದರಲ್ಲಿ ಹಚ್ಚಹಸುರೇ ಕಾಣುತ್ತಿದೆ. ಇಡೀ ಭೂಮಿ ತುಂಬೆಲ್ಲಾ ಹಚ್ಚ ಹಸುರಿನ ಜಮಖಾನೆಯನ್ನು ಹೊದಿಸಿ, ಮೈ ಮುಚ್ಚಿದಂತೆ ಕಾಣುತ್ತದೆ. ಹಸುರಲ್ಲದೆ ಬೇರೆ ಏನೂ ಕಾಣುತ್ತಿಲ್ಲ ಎಂಬುದನ್ನು ಕವಿ ಮೇಲಿನಂತೆ ಹೇಳಿದ್ದಾರೆ. | |
| | ***ಸ್ವಾರಸ್ಯ :*** ಕವಿ ಪ್ರಜ್ಞೆಗೆ ಪ್ರಕೃತಿ ಒಲುಮೆಯೇ ಮುಕ್ತಿಯಾನಂದ ಸಾಧನೆ ಎಂಬಂತೆ ಕವಿ ಹಾಗೂ ಪ್ರಕೃತಿ ಒಂದಾಗುವ ಅವರ ಅದ್ವೈತ ಸ್ಥಿತಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 52. | "ಜಾನಕಿಯ ಮಗನಿದಕೆ ಬೆದರುವನೆ." | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಲಕ್ಷ್ಮೀಶ ಕವಿ ರಚಿಸಿರುವ 'ಜೈಮಿನಿ ಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ. | |
| | ***ಸಂದರ್ಭ :*** ಶ್ರೀರಾಮನ ಯಾಗದ ಕುದುರೆ ವಾಲ್ಮೀಕಿ ಆಶ್ರಮದ ಉದ್ಯಾನವನ್ನು ಪ್ರವೇಶಿಸಿ ಹಸಿರು ಹುಲ್ಲನ್ನು ತಿನ್ನುತ್ತಿತ್ತು. ಇದನ್ನು ಕಂಡ ಲವನು ಹತ್ತಿರ ಬಂದು ನೋಡಿದಾಗ ಅದರ ಹಣೆಯ ಮೇಲಿದ್ದ ಲಿಖಿತವನ್ನು ಓದಿ ಉರಿದೆದ್ದು ತನ್ನ ಉತ್ತರೀಯದಿಂದ ಕುದುರೆಯನ್ನು ಬಾಳೆಯ ಗಿಡಕ್ಕೆ ಕಟ್ಟಿಹಾಕುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಮುನಿಸುತರು ಹೆದರಿ, ಇದು ಅರಸರ ಕುದುರೆ, ಅವರಿಗೆ ತಿಳಿದರೆ ನಮ್ಮನ್ನು ಬಡಿಯುವರು ಎಂದಾಗ ಪಾರ್ವರ ಮಕ್ಕಳು ಹೆದರಿದರೆ ನಾನು ಹೆದರುವುದಿಲ್ಲ ಎಂಬುದನ್ನು ಮೇಲಿನಂತೆ ಹೇಳುತ್ತಾನೆ. | |
| | ***ಸ್ವಾರಸ್ಯ :*** ಲವನಿಗೆ ತಾಯಿಯ ಮೇಲಿದ್ದ ಗೌರವ, ಸೀತೆ ಮಕ್ಕಳನ್ನು ಬೆಳೆಸಿದ ರೀತಿ, ರಕ್ತಗತವಾಗಿದ್ದ ಕ್ಷಾತ್ರಗುಣ, ಎಲ್ಲವನ್ನೂ ಎದುರಿಸಲು ಸನ್ನದ್ಧನಾಗಿರುವ ಲವನ ವೀರತೆ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| X. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | 1 × 4 = 4 |
| 53. | ಕಲುಷಿತವಾದೀ ..................................................<br>.....................................................................<br>.....................................................................<br>....................................................... ಮುಟ್ಟೋಣ.<br>**ಅಥವಾ**<br>ಮತಗಳೆಲ್ಲವೂ ..................................................<br>.....................................................................<br>.....................................................................<br>....................................................... ಬಿತ್ತೋಣ.<br>***ಉತ್ತರ :***<br>ಕಲುಷಿತವಾದೀ ನದೀಜಲಗಳಿಗೆ<br>ಮುಂಗಾರಿನ ಮಳೆಯಾಗೋಣ<br>ಬರಡಾಗಿರುವೀ ಕಾಡುಮೇಡುಗಳ<br>ವಸಂತವಾಗುತ ಮುಟ್ಟೋಣ.<br>**ಅಥವಾ**<br>ಮತಗಳೆಲ್ಲವೂ ಪಥಗಳು ಎನ್ನುವ<br>ಹೊಸ ಎಚ್ಚರದೊಳು ಬದುಕೋಣ<br>ಭಯ–ಸಂಶಯದೊಳು ಕಂದಿದ ಕಣ್ಣೊಳು<br>ನಾಳಿನ ಕನಸನು ಬಿತ್ತೋಣ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XI. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 54. | ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ<br>ಮಂಡಲ–ಗಿಂಡಲಗಳ ಗಡ ಮುಕ್ಕಿ<br>ತೇಲಿಸಿ ಮುಳುಗಿಸಿ ಖಂಡ–ಖಂಡಗಳ<br>ಸಾರ್ವಭೌಮರಾ ನೆತ್ತಿಯ ಕುಕ್ಕಿ<br>ಹಕ್ಕಿ ಹಾರುತಿದೆ ನೋಡಿದಿರಾ ?<br><br>***ಉತ್ತರ :***<br><br>ಕಾಲ ಚಲನಶೀಲವಾದುದು. ಆಯಾ ಕಾಲದ ಪ್ರತಿಯೊಂದು ಘಟನೆಗಳು ಇತಿಹಾಸವಾಗುತ್ತ ಹೋಗುತ್ತವೆ. ಕಾಲಪಕ್ಷಿ ತನ್ನ ಪಯಣದಲ್ಲಿ ಹಲವಾರು ಸಣ್ಣಪುಟ್ಟ ರಾಜಮನೆತನಗಳನ್ನು, ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಸಿ ನಂತರ ಅದರ ಫಸಲನ್ನು ಕೊಯ್ಲು ಮಾಡಿದೆ. ಅನೇಕ ಸಣ್ಣಪುಟ್ಟ ಕೋಟೆ ಕೊತ್ತಲಗಳನ್ನು ನಾಶಪಡಿಸಿ, ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ತೇಲಿಸಿ ಮುಳುಗಿಸಿದೆ. ನಾನೇ ಸಾರ್ವಭೌಮ, ಚಕ್ರಾಧಿಪತಿ ಎಂದು ಮೆರೆದವರ ನೆತ್ತಿಯನ್ನು ಕುಕ್ಕಿದೆ.<br><br>ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ಎಲ್ಲರೂ ತಲೆಬಾಗಲೇಬೇಕು. ಎಷ್ಟೇ ಪ್ರಭಾವಶಾಲಿಯಾದರೂ ಕಾಲಚಕ್ರದ ಮುಂದೆ ತಲೆಬಾಗಲೇ ಬೇಕಾಗುತ್ತದೆ. ಈ ಜಗತ್ತಿನಲ್ಲಿ ಯಾರೂ, ಯಾವುದೂ ಶಾಶ್ವತವಲ್ಲ ಕಾಲಕ್ಕೆ ಅತೀತರಾದವರು ಯಾರೂ ಇಲ್ಲ. 'ಕಾಲಾಯ ತಸ್ಮೈ ನಮಃ' ಎಂಬಂತೆ ಪ್ರಕೃತಿಯ ಸಹಜ ಕ್ರಿಯೆಯೊಂದಿಗೆ ಹೊಂದಿಕೊಳ್ಳಲೇಬೇಕು ಎಂಬ ಮೌಲ್ಯ ಪ್ರಸ್ತುತ ಪದ್ಯಭಾಗದಲ್ಲಿ ಅಡಕವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XII. | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 55. | ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.<br>***ಅಥವಾ***<br>'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ? ತಿಳಿಸಿ.<br>***ಉತ್ತರ :***<br>ಶ್ರೀರಾಮನ ದರ್ಶನದಿಂದ ಮೋಕ್ಷ ದೊರೆಯುತ್ತದೆ. ರಾಮ ಇಲ್ಲಿಗೆ ಬಂದೇ ಬರುತ್ತಾನೆ ಎಂದು ಮತಂಗರು ಶಬರಿಗೆ ಹೇಳಿದ್ದರು. ಶ್ರೀರಾಮನ ದರ್ಶನಕ್ಕಾಗಿ ಹಗಲಿರುಳು ಕಾಯುತ್ತಿದ್ದಳು. ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಕಾಡಿನಲ್ಲಿ ಹುಡುಕುತ್ತಿದ್ದಾಗ 'ದನು' ಎಂಬ ತಪಸ್ವಿಯ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ. ಶ್ರೀರಾಮನ ಬರುವಿಕೆಗಾಗಿ ಕಾದು ಕಾದು ಕಾತರಿಸಿ ಮುಪ್ಪಾಗಿ ಭಕ್ತಿಯೇ ರೂಪುಗೊಂಡಂತೆ ಇದ್ದ ಶಬರಿಯನ್ನು ದರ್ಶಿಸುತ್ತಾರೆ. ಇದರಿಂದ ತುಂಬಾ ಸಡಗರಗೊಂಡ ಶಬರಿ ರಾಮನ ಬಳಿಗೆ ಹೋಗಿ ಮೈಮುಟ್ಟಿ, ಕಾಲಿಗೆ ನಮಸ್ಕರಿಸಿ, ಕೈಯನ್ನು ಕಣ್ಣಿಗೊತ್ತಿಕೊಂಡು ಆನಂದಭಾಷ್ಪ ಸುರಿಸುತ್ತಾಳೆ. ಇಂದು ಏನೂ ಅಣಿ ಮಾಡಿಕೊಂಡಿಲ್ಲ ಎನ್ನುತ್ತಾ ತನ್ನ ಮನದ ಬಯಕೆಯಂತೆ ಬಗೆ ಬಗೆಯ ಕಂಪು ಸೂಸುವ ಹೂಮಾಲೆಯನ್ನು ಆತನ ಕೊರಳಿಗೆ ಹಾಕಿ ಹಿಗ್ಗುತ್ತಾಳೆ. ರುಚಿಕರವಾದ ಹಣ್ಣನ್ನು ನೀಡಿ ಸತ್ಕರಿಸುತ್ತಾಳೆ. ಶಬರಿಯ ಆತಿಥ್ಯದಿಂದ ತೃಪ್ತರಾದ ರಾಮಲಕ್ಷ್ಮಣರು ಧನ್ಯತಾ ಭಾವದಿಂದ ಮಂದಹಾಸ ಬೀರುತ್ತಾರೆ. ನಿನ್ನ ಆದರದಿಂದ ಸಂತೋಷವಾಗಿದೆ. ಕಾಡಿನಲ್ಲಿ ಇಂತಹ ಸವಿಕಾಣುವ ಪುಣ್ಯಕ್ಕೆ ನಿನಗೆಂದಿಗೂ ಋಣಿ. ಇಂದು ಕಾಡು ಎಂಬುದನ್ನು ಮರೆತು ಅಯೋಧ್ಯೆಯ ಅರಮನೆ ಎನಿಸಿತು. ನಿನ್ನನ್ನು ತಾಯಿ ಎಂದೇ ಬಗೆದೆವು ಎಂದು ರಾಮ ಹೇಳಿದಾಗ 'ರೂಪಿನಂತೆ ಮಾತು ಕೂಡ ಉದಾರವಾಗಿದೆ. ಸಿದ್ಧರ ವರವಿಂದು ಫಲಿಸಿದೆ. ನಿಮ್ಮನ್ನು ಕಾಣಲು ಪುಣ್ಯ ಮಾಡಿದ್ದೆನು. ಇಂದಿಗೆ ನನ್ನೆಲ್ಲಾ ಚಿಂತೆಗಳು ಹಿಂಗಿ ಹೋದವು. ಗುರುಗಳನ್ನು ಪೂಜಿಸಿದ ಫಲ ಲಭಿಸಿತು' ಎಂದು ಶಬರಿ ತೃಪ್ತಿಪಡುತ್ತಾಳೆ.<br>***ಅಥವಾ***<br>ಶ್ರೀರಾಮನ ಗುಣಸ್ವಭಾವದ ಸೆಳೆತಕ್ಕೆ ಸಿಲುಕಿ, ಆತನ ದರ್ಶನ ಪಡೆಯುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಅಸಂಖ್ಯಾತ ಭಕ್ತ ಸಮೂಹದಲ್ಲಿ ಶಬರಿಯೂ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಒಬ್ಬಳು. ಮತಂಗರು ದಿವ್ಯಲೋಕವನ್ನು ಸೇರಿದ ಬಳಿಕ ಶಬರಿ ಶ್ರೀರಾಮನ ಧ್ಯಾನದಲ್ಲಿ ನಿರತಳಾಗಿದ್ದಳು. ಗುರು ಸಿದ್ಧರಾದ ಮತಂಗರ ಮಾತಿನಲ್ಲಿ ನಂಬಿಕೆ ಇಟ್ಟಿದ್ದ ಶಬರಿ, ರಾಮ ಬಂದೇ ಬರುತ್ತಾನೆ. ಆತನ ದರ್ಶನದಿಂದ ಮುಕ್ತಿ ಪಡೆಯಬಹುದೆಂದು ತಿಳಿದಿದ್ದಳು. ಈ ಕಾರಣದಿಂದಾಗಿ ಶಬರಿ ಪ್ರತಿದಿನ ಕಾಡಿಗೆ ಹೋಗಿ ಬಗೆಬಗೆಯ ಹೂವು, ತಳಿರು, ಹಣ್ಣು ಹಂಪಲುಗಳನ್ನು ಸಂಗ್ರಹಿಸಿ ತಂದು ಜೋಡಿಸಿ ಇಡುತ್ತಿದ್ದಳು. ರಾಮ ಬಾರದೇ ಇದ್ದಾಗ ಮರುದಿನ ಬಾಡಿಹೋದ ಹೂ, ಹಣ್ಣು ತಳಿರುಗಳನ್ನು ವಿಂಗಡಿಸಿ ಅವುಗಳ ಜಾಗದಲ್ಲಿ ಹೊಸತನ್ನು ಇರಿಸಿ ರಾಮನ ಬರುವಿಕೆಗಾಗಿ ಕಾಯುತ್ತಿದ್ದಳು. ಒಂದು ದಿನವೂ ಬೇಸರಿಸಿಕೊಳ್ಳದೆ ಇದೇ ಕಾಯಕದಲ್ಲಿ ತೊಡಗಿದ್ದಳು. 'ದನು'ವಿನ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸಿದ ರಾಮಲಕ್ಷ್ಮಣರಿಗೆ ತನ್ನ ಮನದ ಬಯಕೆಯಂತೆ ಆತಿಥ್ಯವನ್ನು ನೀಡಿ ಸತ್ಕರಿಸುತ್ತಾಳೆ. ತನ್ನ ಆತಿಥ್ಯದಿಂದ ತೃಪ್ತಿಗೊಂಡ ರಾಮಲಕ್ಷ್ಮಣರನ್ನು ನೋಡಿ ಧನ್ಯಳಾಗುತ್ತಾಳೆ. ಆನಂದಭಾಷ್ಪ ಸುರಿಸುತ್ತಾಳೆ. 'ನಿನ್ನ ಪ್ರೀತಿ, ವಾತ್ಸಲ್ಯ ಕಾಡು ಎಂಬುದನ್ನು ಮರೆಸಿ. ಅಯೋಧ್ಯೆಯ ಅರಮನೆ ಎನಿಸಿತು. ನಿನ್ನನ್ನು ತಾಯಿಯೆಂದೇ ಬಗೆದೆವು' ಎಂದು ರಾಮ ಹೇಳಿದಾಗ 'ಧನ್ಯೆ ನಾನು, ಗುರು ಸಿದ್ಧರ ವರ ಇಂದು ಫಲಿಸಿದೆ' ಎನ್ನುತ್ತಾಳೆ. ಶಬರಿಗೆ ಗುರು ಮತಂಗರ ಮೇಲಿದ್ದ ಭಕ್ತಿ, ನಂಬಿಕೆ, ಹುಸಿಯಾಗಲಿಲ್ಲ. ರಾಮನ ದರ್ಶನ ಪಡೆದು ಮುಕ್ತಿ ಹೊಂದುತ್ತಾಳೆ. 'ತಾಳುವಿಕೆಗಿಂತ ತಪವಿಲ್ಲ', 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ನಿಜವಾಗಿದೆ. | |
| 56. | ಶ್ರೀಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳೇನು ? ವಿವರಿಸಿ.<br>***ಅಥವಾ***<br>ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.<br>***ಉತ್ತರ :***<br>ಜೀವನದಲ್ಲಿ ಪರಸ್ಪರ ಹೊಂದಾಣಿಕೆ, ಸಾಮರಸ್ಯ ಅತ್ಯಗತ್ಯ. ಇಲ್ಲವಾದರೆ ಮತ್ಸರ, ಛಲ ಪ್ರಧಾನವಾಗಿ ಒಬ್ಬರನ್ನೊಬ್ಬರು ನಾಶ ಮಾಡುವವರೆಗೆ ಬೆಳೆಯುತ್ತದೆ. ಶತ್ರುವಿನೊಡನೆ ಸಮರಕ್ಕಿಳಿದು ಕಾದಾಡುವ ಮುನ್ನ ಶತ್ರುಬಲದ ವಿವಿಧ ಆಯಾಮಗಳನ್ನು ಶಮನಗೊಳಿಸಲು ವಿವಿಧ ತಂತ್ರಗಳನ್ನು ಬಳಸಿದಾಗ ಗೆಲುವು ಸಾಧ್ಯ. ಅದರಂತೆ ಕೌರವನೊಂದಿಗೆ ಸಂಧಿ ಮುರಿದು ಬಿದ್ದಾಗ ವೀರಕರ್ಣನ ಬಲವನ್ನು ಕುಗ್ಗಿಸಲು ಶ್ರೀಕೃಷ್ಣ ಆತನ ಜನ್ಮರಹಸ್ಯವನ್ನು ತಿಳಿಸಿ, ವಿವಿಧ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಆಮಿಷಗಳನ್ನು ಒಡ್ಡುತ್ತಾನೆ. ಕರ್ಣನ ಬಳಿಗೆ ಬಂದ ಕೃಷ್ಣ ಆತನನ್ನು ತನ್ನ ರಥದ ಪೀಠದಲ್ಲಿ ತೊಡೆಗೆ ತೊಡೆ ತಾಕುವಂತೆ ಕೂರಿಸಿಕೊಂಡು, 'ನಿಮ್ಮಲ್ಲಿ ಯಾದವರು ಮತ್ತು ಕೌರವರಲ್ಲಿ ಯಾವುದೇ ಭೇದವಿಲ್ಲ. ವಿಚಾರ ಮಾಡಿದರೆ ಈ ಭೂಮಿಗೆ ನೀನೆ ಒಡೆಯ ಇದು ನಿನ್ನ ಅರಿವಿಗೆ ಬಂದಿಲ್ಲ. ಕುಂತಿ ಪಡೆದ ಐದು ಮಂತ್ರಗಳಲ್ಲಿ ನೀನೆ ಮೊದಲಿಗ, ಎರಡನೆಯವನು ಯುಧಿಷ್ಠಿರದೇವ, ಮೂರನೆಯವನು ಕಲಿಭೀಮ, ನಾಲ್ಕನೆಯವನು ಅರ್ಜುನ ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ-ಸಹದೇವರು ಜನಿಸಿದರು. ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುತ್ತೇನೆ. ಪಾಂಡವರು ಕೌರವರು ನಿನ್ನ ಸೇವಕರಾಗಿರುತ್ತಾರೆ. ಇದನ್ನು ಬಿಟ್ಟು ದುರ್ಯೋಧನನ ಎಂಜಲಿಗೆ ಕೈ ಚಾಚುವುದೇ ? ನೀನು ರಾಜನಾದರೆ ಎಡಭಾಗದಲ್ಲಿ ಕೌರವರ ಸೈನ್ಯ, ಬಲಭಾಗದಲ್ಲಿ ಪಾಂಡವರ ಸೈನ್ಯ, ನಡುವೆ ಮಾದ್ರ, ಮಾಗಧ, ಯಾದವರು ಇರುತ್ತಾರೆ. ಇವರ ನಡುವೆ ಒಡ್ಡೋಲಗದಲ್ಲಿ ವಿಜೃಂಭಿಸುವುದನ್ನು ಬಿಟ್ಟು ದುರ್ಯೋಧನ ಕರೆದಾಗ 'ಸ್ವಾಮಿ ನಿಮ್ಮ ಪ್ರಸಾದ ಎನ್ನುವುದು ಕಷ್ಟವಾಗುವುದಿಲ್ಲವೇ ? ಆದ್ದರಿಂದ ನೀನು ನನ್ನ ಮಾತನ್ನು ಕೇಳಿ ಪಾಂಡವರ ಪಕ್ಷವನ್ನು ಸೇರು' ಎಂದು ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡುತ್ತಾನೆ. | |
| | ***ಅಥವಾ*** | |
| | ದ್ಯೂತದ ಪಣದಂತೆ ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸವನ್ನು ಮುಗಿಸಿ ಬಂದ ಪಾಂಡವರು ತಮ್ಮ ಪಾಲಿನ ರಾಜ್ಯವನ್ನು ಕೇಳುತ್ತಾರೆ. ಅಜ್ಞಾತವಾಸ ಪೂರ್ಣವಾಗಿಲ್ಲ ಎಂಬ ನೆಪವೊಡ್ಡಿ ರಾಜ್ಯ ನೀಡಲು ದುರ್ಯೋಧನ ನಿರಾಕರಿಸುತ್ತಾನೆ. ಸಂಧಾನಕ್ಕಾಗಿ ಧರ್ಮರಾಯನು ಕೃಷ್ಣನನ್ನು ಕಳಿಸುತ್ತಾನೆ. ಸಂಧಿ ಮುರಿದು ಬಿದ್ದು ಯುದ್ಧವೇ ಸಿದ್ಧ ಎಂಬ ತೀರ್ಮಾನವಾಗುತ್ತದೆ. ಕೌರವರ ಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಬಲಶಾಲಿ ಎಂದರೆ ಕರ್ಣ. ಕರ್ಣನಿಂದ ಪಾಂಡವರನ್ನು ರಕ್ಷಿಸಲು ನಿರ್ಧರಿಸಿದ ಕೃಷ್ಣ ಕರ್ಣನಿಗೆ ಜನ್ಮರಹಸ್ಯವನ್ನು ತಿಳಿಸುತ್ತಾನೆ. ಕೃಷ್ಣನ ತಂತ್ರವನ್ನು ಅರಿತ ಕರ್ಣನ ಕುತ್ತಿಗೆಯ ನರಗಳು ಬಿಗಿಯಾದವು. ಒಂದೇ ಸಮನೆ ಕಣ್ಣೀರು ಸುರಿಯಲಾರಂಭಿಸಿತು. ದುರ್ಯೋಧನನಿಗೆ ಕೇಡಾಯಿತೆಂದು ಮನದಲ್ಲಿ ಯೋಚಿಸಿದನು. ತನ್ನ ಜನ್ಮರಹಸ್ಯವನ್ನು ತಿಳಿಸಿ ಕೊಂದನು ಎಂದು ಚಿಂತಿಸಿದನು. ಏನನ್ನೂ ಹೇಳದ ಕರ್ಣನನ್ನು ಕುರಿತು ಚಿತ್ತಗ್ಲಾನಿ ಯಾವುದು ? ಪಾಂಡವರಿಂದ ಸೇವೆ ಮಾಡಿಸಿಕೊಳ್ಳಲು ಮನಸ್ಸಿಲ್ಲವೇ ? ಮರುಳುತನ ಬೇಡ, ನಿನ್ನ ಅಪದೆಸೆಯನ್ನು ಬಯಸುವವನಲ್ಲ ಎಂದು ಕೃಷ್ಣ ಹೇಳಿದಾಗ 'ಮರುಳು ಮಾಧವ' ಈ ರಾಜ್ಯದ ಸಿರಿಗೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸೋಲುವವನಲ್ಲ. ಕೌರವರು, ಪಾಂಡವರಿಂದ ಸೇವೆ ಮಾಡಿಸಿಕೊಳ್ಳುವ ಮನಸ್ಸಿಲ್ಲ. ತನ್ನನ್ನು ಕಾಪಾಡಿದ ಒಡೆಯನಿಗೆ ಹಗೆಗಳ ಶಿರಗಳ್ನು ಕಡಿದು ಒಪ್ಪಿಸುವ ಭರದಲ್ಲಿದ್ದೆನು. ನನ್ನ ಜನ್ಮರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದು ಬಿಟ್ಟೆ. ನನಗೆ ದುರ್ಯೋಧನನೆ ಒಡೆಯ ಆತನ ಹಗೆಗಳೇ ನನ್ನ ಹಗೆಗಳು. ನಾಳೆ ನಡೆಯುವ ಸಮರದಲ್ಲಿ ನನ್ನ ಭುಜಬಲದ ಪರಾಕ್ರಮವನ್ನು ಪಾಂಡವರಲ್ಲಿ ತೋರುತ್ತೇನೆ. ಕೌರವನ ಋಣ ತೀರುವಂತೆ ರಣರಂಗದಲ್ಲಿ ಹೋರಾಡಿ, ಮೃತ್ಯುದೇವತೆಗೆ ಭೋಜನಕೂಟವನ್ನು ಏರ್ಪಡಿಸುತ್ತೇನೆ. ಅವನಿಗಾಗಿ ನನ್ನ ಶರೀರವನ್ನು ಅರ್ಪಿಸುತ್ತೇನೆ. ಆದರೆ ನಿನ್ನವರಾದ ಪಾಂಡವರೈವರನ್ನು ನೋಯಿಸುವುದಿಲ್ಲ. 'ಸೂರ್ಯನ ಮೇಲಾಣೆ' ಎನ್ನುತ್ತಾನೆ. ಸ್ವಾಮಿ ನಿಷ್ಠೆಗೆ ಬದ್ಧನಾಗಿ, ಕೃಷ್ಣನ ಆಮಿಷಗಳಿಗೆ ಒಳಗಾಗದೆ ಅಸಾಯಕತೆ, ನೋವು, ಸಂಕಟಗಳಿಂದ ಬಳಲುವ ಕರ್ಣನ ವ್ಯಕ್ತಿತ್ವದ ಹಿರಿಮೆ ವ್ಯಕ್ತವಾಗಿದೆ. | |
| XIII. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | $1 \times 4 = 4$ ( 2 + 2 ) |
| 57. | ವಿಜಯನಗರ ಸಾಮ್ರಾಜ್ಯದ ಪತನದ ನಂತರ ಕರ್ನಾಟಕದ ಮಲೆನಾಡಿನ ರಾಜ್ಯವಾದ ಕೆಳದಿ ಖ್ಯಾತಿ ಪಡೆಯಿತು. ಚೆನ್ನಮ್ಮಾಜಿಯು ಕೊಟ್ಟಿಪುರದ ಸಿದ್ದಪ್ಪಶೆಟ್ಟರ ಕುವರಿ. ಕೆಳದಿಯ ಸೋಮಶೇಖರನು ಈಕೆಯನ್ನು ವಿವಾಹವಾದನು. ಕ್ಷುಲ್ಲಕರ ಸೆಳವಿಗೆ ಸಿಲುಕಿ ವ್ಯಸನಾಸಕ್ತನಾದ ಸೋಮಶೇಖರನನ್ನು ಬಿಜಾಪುರದ ದಂಡಿನ ನಾಯಕ ಜನ್ನೋಪಂತನು ಕೊಂದನು. ಇದರಿಂದಾಗಿ ಕೆಳದಿಯ ಸಂಸ್ಥಾನ ಗಂಡಾಂತರಕ್ಕೆ ಗುರಿಯಾಯಿತು. ಅಸಾಧಾರಣ ಧೈರ್ಯಶಾಲಿಯಾದ ಚೆನ್ನಮ್ಮಾಜಿ ಜಾಣತನದಿಂದ ವರ್ತಿಸಿದಳು. ಧಾರುಣವಾದ ಪತಿಯ ಮರಣದ ದುಃಖವನ್ನು ನುಂಗಿಕೊಂಡು ರಾಷ್ಟ್ರದ ಹಿತಚಿಂತನೆಗೆ ಮುಂದಾದಳು. ಚಾಣಾಕ್ಷೆಯಾದ ಈಕೆ ಅಲ್ಪಾವಧಿಯಲ್ಲಿಯೇ ರಾಜನೀತಿಯ ರಹಸ್ಯವನ್ನು ಅರಿತು ಕಠೋರ ಯೋಜನೆಗಳನ್ನು ಕೈಗೊಂಡಳು. ಅನ್ಯಾಯವಾಗಿ ತನ್ನ ಪತಿಯನ್ನು ಕೊಂದ ಜನ್ನೋಪಂತನನ್ನು ಕೊಂದು ಸೇಡು ತೀರಿಸಿಕೊಂಡಳು.<br><br>ಶತ್ರುಗಳು ಚೆನ್ನಮ್ಮಾಜಿಯ ಕೈಯಲ್ಲಿ ಆಡಳಿತ ಇರದಂತೆ ಮಾಡಲು ತಂತ್ರ ಹೂಡಿದರು. ಅರಮನೆಯ ಸಂಬಂಧಿಕನನ್ನು ಪ್ರತಿಸ್ಪರ್ಧಿಯಾಗಿಸಿದರು. ಆದರೆ ಈ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕುಚೋದ್ಯಗಳನ್ನೆಲ್ಲ ಮೆಟ್ಟಿ ನಿಂತಳು. ೧೬೭೭ ರಲ್ಲಿ ನಾಡಿನ ಜನರೆಲ್ಲ ಸೇರಿ ಚೆನ್ನಮ್ಮಾಜಿಗೆ ಪಟ್ಟಾಭಿಷೇಕ ಮಾಡಿದರು. ತರುವಾಯ ಬಸಪ್ಪ ನಾಯಕನನ್ನು ದತ್ತುಪುತ್ರನಾಗಿ ಸ್ವೀಕರಿಸಿ ರಾಜ್ಯಭಾರ ಮಾಡಿದಳು. ಕೇವಲ ಸಂಗ್ರಾಮ ಕಾರ್ಯವಲ್ಲದೆ ಅನೇಕ ಪ್ರಜಾಹಿತ ಕಾರ್ಯಗಳನ್ನು, ಧರ್ಮಕಾರ್ಯಗಳನ್ನು ಮಾಡಿದಳು. ತನ್ನ ಪತಿಯ ನೆನಪಿಗಾಗಿ ಅಗ್ರಹಾರಗಳನ್ನು ಸ್ಥಾಪಿಸಿದಳು. ದೇವರ ಗುಡಿಗಳನ್ನು ಭದ್ರಗೊಳಿಸಿದಳು, ಉತ್ಸವಗಳನ್ನು ಸಾಂಗಗೊಳಿಸಿದಳು, ಮಠಗಳನ್ನು ಕಟ್ಟಿಸಿದಳು, ಜಾತಿ ಮತ ಭೇದ ಎಣಿಸದೆ ನಾನಾ ವಿಧದ ಶಾಶ್ವತ ದಾನಗಳನ್ನು ನೀಡಿ ಚೆನ್ನಮ್ಮಾಜಿ ಕೀರ್ತಿಶೇಷಳಾದಳು.<br><br>*ಪ್ರಶ್ನೆಗಳು :*<br><br>ಅ) ಚೆನ್ನಮ್ಮಾಜಿ ತನ್ನ ಪತಿಯ ಸಾವಿನ ಸೇಡನ್ನು ಹೇಗೆ ತೀರಿಸಿ ಕೊಂಡಳು ?<br><br>ಬ) ಚೆನ್ನಮ್ಮಾಜಿಯು ಕೀರ್ತಿಶೇಷಳಾಗಲು ಕಾರಣವಾದ ಅಂಶಗಳಾವುವು ?<br><br>***ಉತ್ತರ :***<br><br>ಅ) ಪತಿಯ ಮರಣದಿಂದ ಕೆಳದಿ ಸಂಸ್ಥಾನ ಗಂಡಾಂತರಕ್ಕೆ ಗುರಿಯಾಯಿತು. ಅಸಾಧಾರಣ ಧೈರ್ಯಶಾಲಿಯಾದ ಚೆನ್ನಮ್ಮಾಜಿ ಜಾಣತನದಿಂದ ವರ್ತಿಸಿದಳು. ಪತಿಯ ಮರಣದ ದುಃಖವನ್ನು ನುಂಗಿಕೊಂಡು ರಾಷ್ಟ್ರದ ಹಿತಚಿಂತನೆಗೆ ಮುಂದಾದ ಈಕೆ ಚಾಣಕ್ಷತನದಿಂದ ಅಲ್ಪಾವಧಿಯಲ್ಲಿಯೇ ರಾಜನೀತಿಯ ರಹಸ್ಯವನ್ನು ಅರಿತು ಕಠೋರ ಯೋಜನೆಗಳನ್ನು ಕೈಗೊಂಡಳು. ಅನ್ಯಾಯವಾಗಿ ತನ್ನ ಪತಿಯನ್ನು ಕೊಂದ ಜನ್ನೋಪಂತನನ್ನು ಕೊಂದು ಸೇಡು ತೀರಿಸಿಕೊಂಡಳು.<br><br>ಬ) ಚೆನ್ನಮ್ಮಾಜಿಯ ಯೋಗ್ಯತೆ ಘನವಾದುದು ಕೇವಲ ಸಂಗ್ರಾಮ ಕಾರ್ಯವಲ್ಲದೆ ಅನೇಕ ಪ್ರಜಾಹಿತ ಕಾರ್ಯಗಳನ್ನು, ಧರ್ಮಕಾರ್ಯಗಳನ್ನು ಮಾಡಿದಳು. ತನ್ನ ಪತಿಯ ನೆನಪಿಗಾಗಿ ಅಗ್ರಹಾರಗಳನ್ನು ಸ್ಥಾಪಿಸಿದಳು. ದೇವರ ಗುಡಿಗಳನ್ನು ಭದ್ರಗೊಳಿಸಿದಳು, ಉತ್ಸವಗಳನ್ನು ಸಾಂಗಗೊಳಿಸಿದಳು, ಮಠಗಳನ್ನು ಕಟ್ಟಿಸಿದಳು, ಜಾತಿ ಮತ ಭೇದ ಮಾಡದೆ ನಾನಾ ವಿಧದ ಶಾಶ್ವತ ದಾನಗಳನ್ನು ನೀಡಿ ಕೀರ್ತಿಶೇಷಳಾದಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XIV. | **ಪತ್ರ ಲೇಖನ ಬರೆಯುವುದು :** | 1 × 5 = 5 |
| 58. | ನಿಮ್ಮನ್ನು ಮೂಡಿಗೆರೆಯ ಸರ್ಕಾರಿ ಪ್ರೌಢಶಾಲೆಯ 'ಇಂದಿರೇಶ' ಎಂದು ಭಾವಿಸಿಕೊಂಡು, ನಿಮ್ಮ ಗ್ರಾಮಕ್ಕೆ ಬೀದಿ ದೀಪ ಹಾಕಿಸಿ ಕೊಡುವಂತೆ ಕೋರಿ, ಗ್ರಾಮಪಂಚಾಯ್ತಿ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ 'ಶ್ರೀಲಕ್ಷ್ಮಿ' ಎಂದು ಭಾವಿಸಿಕೊಂಡು, 'ಫಿಟ್ ಇಂಡಿಯಾ ಸಪ್ತಾಹ'ದ ಸಮಾರೋಪ ಸಮಾರಂಭಕ್ಕೆ ಆಹ್ವಾನಿಸಿ, ಮೈಸೂರಿನ ಕೃಷ್ಣರಾಜ ನಗರದಲ್ಲಿ ವಾಸವಿರುವ 'ಉಷಾ' ಎಂಬ ಹೆಸರಿನ ತಾಯಿಯವರಿಗೆ ಪತ್ರವನ್ನು ಬರೆಯಿರಿ. | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ತಾಯಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XV. | **ಪ್ರಬಂಧ ಬರೆವಣಿಗೆ :** | 1 × 5 = 5 |
| 59. | ಸ್ವಚ್ಛ ಭಾರತ ಅಭಿಯಾನ. | |
| | **ಅಥವಾ** | |
| | ಮತದಾರರ ಸಾಕ್ಷರತಾ ಸಂಘ. | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |